ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು, ಕೈಮಗ್ಗ ಮತ್ತು ಜವಳಿ
ರವರ ಕಛೇರಿ

ಕರ್ನಾಟಕ ಸರ್ಕಾರ

ನಂ.86, ಶುಭೋದಯ ಕಾಂಪ್ಲೆಕ್ಸ್,
ರೈಲ್ವೆ ಪ್ಯಾರಲಲ್ ರೋಡ್,
ಕುಮಾರ ಪಾರ್ಕ್ ಪಶ್ಚಿಮ,
ಬೆಂಗಳೂರು –560 020

ಸಂಖ್ಯೆ: ಕೈಜಇ/ಕೈಮಗ್ಗ/ಅಧೀ/ಸಾಲಮನ್ನಾ/ಪ್ರಪತ್ರ/2017-18 ದಿನಾಂಕ: 22.01.2018

ಜಂಟಿ ನಿರ್ದೇಶಕರು,
ಕೈಮಗ್ಗ ಮತ್ತು ಜವಳಿ,
ಉತ್ತರ / ದಕ್ಷಿಣ / ಪೂರ್ವ / ಪಶ್ಚಿಮ
ವಲಯ / ವಿಭಾಗ.

"ಜರೂರು"

ಉಪ ನಿರ್ದೇಶಕರು,
ಕೈಮಗ್ಗ ಮತ್ತು ಜವಳಿ ಇಲಾಖೆ,
ಜಿಲ್ಲಾಪಂಚಾಯತ್,
ಬಾಗಲಕೋಟೆ / ಬೆಳಗಾವಿ / ಗದಗ್ /
ತುಮಕೂರು / ಕೊಪ್ಪಳ / ಶಿವಮೊಗ್ಗ /
ಬೆಂಗಳೂರು ನಗರ / ಬೆಂಗಳೂರು (ಗ್ರಾ).

ಮಾನ್ಯರೆ,

ವಿಷಯ:- ನೇಕಾರರ ಸಾಲ ಮನ್ನಾ ಕುರಿತು ಅನುಬಂಧದಲ್ಲಿ ಮಾಹಿತಿ ನೀಡುವ ಕುರಿತು.

ಉಲ್ಲೇಖ:- ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ: 04.11.2017.

*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈ ಹಿಂದೆ ನೇಕಾರರ ಸಹಕಾರ ಸಂಘಗಳು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು, ಪಟ್ಟಣ ಸಹಕಾರಿ ಬ್ಯಾಂಕುಗಳು, ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿಂದ ಸಾಲ ಪಡೆದು ದಿನಾಂಕ: 30.06.2017 ಕ್ಕೆ ಹೊರಬಾಕಿ ಸಾಲದ ವಿವರಗಳನ್ನು ನೀಡುವುದು ಸರಿಯಷ್ಟೇ.

ಈಗ ನೇಕಾರರಿಗೆ ವಿವಿಧೋದ್ದೇಶ ಸಹಕಾರ ಸಂಘಗಳು, ಕೈಗಾರಿಕಾ ಸಹಕಾರ ಬ್ಯಾಂಕ್‌ಗಳು, ಇತರೆ ಸಹಕಾರಿ ಬ್ಯಾಂಕ್‌ಗಳು, ಸೌಹಾರ್ದ ಸಹಕಾರಿ / ಸೌಹಾರ್ದ ಸಹಕಾರಿ ಬ್ಯಾಂಕ್, ಕೃಷಿ ಪತ್ತಿನ ಸಹಕಾರಿ ಸಂಘಗಳಿಂದ ನೇಕಾರರಿಗೆ ನೀಡಿದ ಸಾಲದ ವಿವರಗಳನ್ನು ಈಗಾಗಲೇ ನಿಮಗೆ ಸಲ್ಲಿಸಿರುವ 25 ಕಾಲಂಗಳ ಪ್ರಪತ್ರದಲ್ಲಿ ಈ ಕಛೇರಿಗೆ ಕೂಡಲೇ ಸಲ್ಲಿಸಲು ಸೂಚಿಸಿದೆ ಹಾಗೂ ಸಾಫ್ಟ್ ಕಾಪೀಯನ್ನು ಮೆ: ಯು.ಸಿ.ಬಿ. ಕನ್ಸಲ್ಟೆನ್ಸಿ ಸರ್ವೀಸಸ್, ಬೆಂಗಳೂರು ಇವರ ಇ-ಮೇಲ್ ucbcsdht@gmail.com ಗೆ ಕಳುಹಿಸಲು ಸೂಚಿಸಿದೆ. ಈ ವಿಷಯವನ್ನು ಅತೀ ಜರೂರು ಎಂದು ಪರಿಗಣಿಸಿ ದಿನಾಂಕ: 27.01.2018 ರ ಒಳಗಾಗಿ ಮಾಹಿತಿಯನ್ನು ಸಲ್ಲಿಸಲು ತಿಳಿಸಿದೆ.

ದಿನಾಂಕ: 26.07.2012 ರಿಂದ 30.06.2017 ರವರೆಗಿನ ಅಲ್ಪಾವಧಿ/ ಮಧ್ಯಮಾವಧಿ (ಅಂದರೆ ಗರಿಷ್ಠ 5 ವರ್ಷಗಳ ಮರುಪಾವತಿ ಅವಧಿಯ ಸಾಲ) ಮಾತ್ರ ಪರಿಗಣಿಸತಕ್ಕದ್ದು.

**(ಅಡಕ: 25 ಕಾಲಂಗಳ ಪ್ರಪತ್ರ)**

ತಮ್ಮ ವಿಶ್ವಾಸಿ,

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು ಕೈಮಗ್ಗ ಮತ್ತು ಜವಳಿ

ಪ್ರತಿಯನ್ನು :- ಮೆ: ಯು.ಸಿ.ಬಿ. ಕನ್ಸಲ್ಟೆನ್ಸಿ ಸರ್ವೀಸಸ್, ನಂ.105, 3ನೇ ಮೈನ್, 5ನೇ 'ಸಿ' ಕ್ರಾಸ್, 1ನೇ ಫೇಸ್, ಗಿರಿನಗರ, ಬೆಂಗಳೂರು-560 085 ಇವರಿಗೆ ಕಳುಹಿಸುತ್ತಾ, ಜಿಲ್ಲೆಗಳಿಂದ ಬರುವ ಪ್ರಸ್ತಾವನೆಯ ಮಾಹಿತಿಗಳನ್ನು ಕ್ರೋಢೀಕರಿಸಿ ಹೆಚ್ಚುವರಿಯಾಗಿ ಬೇಕಾಗುವ ಅನುದಾನದ ವಿವರ ಹಾಗೂ ಸಂಘಗಳು ಮತ್ತು ನೇಕಾರರ ಮಾಹಿತಿಯನ್ನು ಇಲಾಖೆಗೆ ಸಲ್ಲಿಸಲು ಕಳುಹಿಸಿದೆ.